ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಬೆಂಗಳೂರು ನಗರ ಸಂಚಾರಿ ಪೊಲೀಸರು ಸಂಚಾರಿ ನಿಯಮದ ಬಗ್ಗೆ

ಶ್ರೀ ಹೆಚ್.ಎಂ. ರೇವಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು ) :-

1237 (1431) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಸಂಚಾರಿ ಪೊಲೀಸರು ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಿನಾಂಕ: 01.01.2020 ರಿಂದ ದಿನಾಂಕ: 31.01.2020ರಲ್ಲಿ ಸ್ಥಳದಂಡ ವಿಧಿಸಿ ಠಾಣೆವಾರು ಸಂಗ್ರಹಿಸಿದ ದಂಡದ ಮೊತ್ತವೆಷ್ಟು; ಸರ್ಕಾರದ ಲೆಕ್ಕ ಶೀರ್ಷಿಕೆಗೆ ದಿನಾಂಕವಾರು ಜಮಾ ಮಾಡಿದ ವಿವರಗಳನ್ನು (ಎ) ಕ.ಸಂ, (ಬಿ) ಸಂಚಾರಿ ಠಾಣೆಯ ಹೆಸರು (ಸಿ) ಸ್ಥಳ ದಂಢ ವಿಧಿಸಿದ ದಿನಾಂಕ ಮತ್ತು ಸಂಗ್ರಹಿಸಿದ ಒಟ್ಟು ಹಣ (ಡಿ) ಸರ್ಕಾರಿ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಒಟ್ಟು ಹಣ ಮತ್ತು ದಿನಾಂಕ ಚಲನ್ ನಂ (ಇ) ಜಮಾ ಮಾಡಿದ ಲೆಕ್ಕ ಶೀರ್ಷಿಕೆ ಮತ್ತು ಒಟ್ಟು ಹಣ ದಿನಾಂಕ (ಎಫ್) ಜಮಾ ಮಾಡಿದ ದಿನಾಂಕದಂದು ಠಾಣಾಧಿಕಾರಿ ಬಳಿ ಇದ್ದ ಒಟ್ಟು ಹಣ (ಜಿ) ಜಮಾ ಮಾಡಿದ ನಂತರ ಠಾಣಾಧಿಕಾರಿ ಬಳಿ ಉಳಿದ ಒಟ್ಟು ಹಣ ಮತ್ತು ಉಳಿಕೆ ಹಣವನ್ನು ಯಾವ ದಿನಾಂಕದಂದು ಜಮಾ ಮಾಡಲಾಗಿದೆ, ಚೆಕ್ ನಂಬರ್ ಜೊತೆಗೆ ವಿವರ ನೀಡುವುದು ;

(ಆ) ದಿನಾಂಕ:01.01.2019 ರಿಂದ 31.01.2019ರ ಅವಧಿಯಲ್ಲಿ ನಿಲುಗಡೆ ನಿಷೇಧ ಪ್ರದೇಶದಲ್ಲಿ ನಿಲ್ಲಿಸಿದ ವಾಹನಗಳನ್ನು ಟೋಯಿಂಗ್ ಮೂಲಕ ಠಾಣೆಗೆ ತೆಗೆದುಕೊಂಡು ಹೋಗಿ ಸ್ಥಳ ದಂಡ ವಿಧಿಸಿ ಸಂಗ್ರಹಿಸಿದ ಮೊತ್ತವೆಷ್ಟು ; ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಠಾಣಾವಾರು ವಿವರಗಳನ್ನು (ಎ) ಕ.ಸಂ. (ಬಿ) ಸಂಚಾರಿ ಠಾಣೆಯ ಹೆಸರು (ಸಿ) ಸ್ಥಳ ದಂಢ ವಿಧಿಸಿದ ದಿನಾಂಕ ಮತ್ತು ಸಂಗ್ರಹಿಸಿದ ಒಟ್ಟು ಹಣ (ಡಿ) ಸರ್ಕಾರಿ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಒಟ್ಟು ಹಣ ಮತ್ತು ದಿನಾಂಕ ಚಲನ್ ನಂ (ಇ) ಜಮಾ ಮಾಡಿದ ಲೆಕ್ಕ ಶೀರ್ಷಿಕೆ ಮತ್ತು ಒಟ್ಟು ಹಣ ದಿನಾಂಕ (ಎಫ್) ಜಮಾ ಮಾಡಿದ ದಿನಾಂಕದಂದು ಠಾಣಾಧಿಕಾರಿ ಬಳಿ ಇದ್ದ ಒಟ್ಟು ಹಣ (ಜಿ) ಜಮಾ ಮಾಡಿದ ನಂತರ ಠಾಣಾಧಿಕಾರಿ ಬಳಿ ಉಳಿದ ಒಟ್ಟು ಹಣ ಮತ್ತು ಉಳಿಕೆ ಹಣವನ್ನು ಯಾವ ದಿನಾಂಕದಂದು ಜಮಾ ಮಾಡಲಾಗಿದೆ ಎಂಬ ವಿಷಯಗಳೊಂದಿಗೆ ವಿವರ ನೀಡುವುದು?